**ದಿನಾಂಕಃ 13.03.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಎಸ್.ಎಸ್. ವಕೀಲರಿಂದಃ**

ನಿ.ಪಿ.2 ರಲ್ಲಿ ಯಾವ ಯಾವ ಆಸ್ತಿಗಳನ್ನು ನಮೂದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.150 ಮತ್ತು 151 ರ ಆಸ್ತಿಗಳು ಎರಡು ಪೋಡಾಗಿರುತ್ತವೆ. ಸರ್ವೆ ನಂ.151/1, 151/2, 151/3 ರ ಆಸ್ತಿಗಳ ಒಟ್ಟು ವಿಸ್ತೀರ್ಣ 3 ಎಕರೆ 7 ಗುಂಟೆ ಆಗಿರುತ್ತದೆ. ಸದರಿ ಸರ್ವೆ ನಂಬರುಗಳ ಪಹಣಿಪತ್ರಿಕೆಗಳಲ್ಲಿ 1 ನೇ ಪ್ರತಿವಾದಿಯ ಹೆಸರು ನಮೂದಾಗಿರುತ್ತದೆ. ಸದರಿ ಸರ್ವೆ ನಂಬರುಗಳ ಕೈಬರವಣಿಗೆ ಪಹಣಿ ಪತ್ರಿಕೆಗಳಲ್ಲಿ ಮಾದಯ್ಯ ಬಿನ್ ಭೀಮಯ್ಯ ಎಂದು ನಮೂದಾಗಿತ್ತು. 1939 ರಿಂದ 1971-72 ರವರೆಗೆ ಸದರಿ ಮೇಲ್ಕಂಡ ಸರ್ವೆ ನಂಬರುಗಳ ಪಹಣಿ ಪತ್ರಿಕೆಗಳಲ್ಲಿ ಮಾದಯ್ಯರವರ ಹೆಸರು ನಮೂದಾಗಿತ್ತು. ಸದರಿ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ಮೇಲ್ಕಂಡ ಆಸ್ತಿಗಳ ಪಹಣಿ ಪತ್ರಿಕೆಗಳು 1 ನೇ ಪ್ರತಿವಾದಿಯವರ ಹೆಸರಿಗೆ ಯಾವ ಆಧಾರದ ಮೇಲೆ ಬದಲಾವಣೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.150 ಮತ್ತು 151 ರಲ್ಲಿ ಒಟ್ಟು 9 ಎಕರೆ 15 ಗುಂಟೆ ಆಸ್ತಿಯನ್ನು 1 ನೇ ಪ್ರತಿವಾದಿಯವರು 1940 ರಲ್ಲಿ ಸ್ವತ್ತಿನ ಹರಾಜಿನ ಮೂಲಕ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಯನ್ನು ನಾನು ನೋಡಿರುತ್ತೇನೆ. ದಾವಾ ಅನುಸೂಚಿ ಸ್ವತ್ತು 1 ನೇ ಪ್ರತಿವಾದಿಯವರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯವರು ಮರಣ ಹೊಂದಿದ ನಂತರ ಅವರ

ಕುಟುಂಬದ ಸದಸ್ಯರು ದಾವಾ ಅನುಸೂಚಿ ಸ್ವತ್ತನ್ನು ಮಾಲೀಕರಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿಸ್ವತ್ತಿನ ಮೇಲೆ ನನಗೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ 3 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶವನ್ನು ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಲಯ, ಟಿ ನರಸಿಪುರ